## ನಿಮ್ಮೊಡನೆ

# ವ್ಯಾಪಕವಾಗುತ್ತಿದೆ ಮಹಿಳಾ ದೌರ್ಜನ್ಯ-ಹಿಂಸೆ ‘ಆರೋಗ್ಯಕರ ಸಮಾಜ’ ಬರಿ ಕನವರಿಕೆಯೆ?

ಹೆಣ್ಣನ್ನು ಸಮಾನವಾಗಿ ನಡೆಸಿಕೊಳ್ಳದ ಯಾವುದೇ ಸಮಾಜಕ್ಕೆ ತನ್ನ ಸಂಸ್ಕೃತಿಯ ಹಿರಿಮೆಯ ಬಗ್ಗೆ ಮಾತನಾಡುವ ಅಥವಾ ಸಂಭ್ರಮಿಸುವ ನೈತಿಕ ಹಕ್ಕಿಲ್ಲ. ಲಿಂಗ ತಾರತಮ್ಯದ ಮೇಲೆ ಆರೋಗ್ಯಕರ ಸಮಾಜ ರೂಪುಗೊಳ್ಳುವುದು ಅಥವಾ ದೇಶವೊಂದರ ಅಭಿವೃದ್ಧಿಯಾಗುವುದು ಸಾಧ್ಯವಿಲ್ಲ.

ಶ್ರದ್ಧಾ ವಾಲ್ಕರ್ ಎನ್ನುವ ಯುವತಿಯನ್ನು ಆಕೆಯೊಂದಿಗೆ ‘ಸಹಜೀವನ’ ನಡೆಸುತ್ತಿದ್ದ ಸಂಗಾತಿಯೇ ಕೊಂದು, ಮೃತ ದೇಹವನ್ನು ಮೂವತ್ತೈದು ತುಣುಕುಗಳಾಗಿ ಕತ್ತರಿಸಿ, ದೆಹಲಿಯ ಬೇರೆ ಬೇರೆ ಭಾಗಗಳಲ್ಲಿ ಎಸೆದಿದ್ದಾನೆ. ಉತ್ತರ ಪ್ರದೇಶದ ಬಾವಿಯೊಂದರಲ್ಲಿ ಯುವತಿಯೊಬ್ಬಳ ದೇಹದ ನಾಲ್ಕು ತುಣುಕುಗಳು ದೊರೆತಿವೆ. ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಯಮುನಾ ಎಕ್ಸ್‌ಪ್ರೆಸ್ ವೇ ಬಳಿ ತರುಣಿಯೊಬ್ಬಳ ಮೃತದೇಹ ಬ್ಯಾಗ್‌ನಲ್ಲಿ ಪತ್ತೆಯಾಗಿದೆ. ಅನ್ಯ ಜಾತಿಯ ಯುವಕನನ್ನು ಪ್ರೇಮಿಸಿದ ಮಗಳನ್ನು ತಾಯಿಯೇ ಕೊಂದಿರುವ ಘಟನೆ ತಮಿಳುನಾಡಿನಿಂದ ವರದಿಯಾಗಿದೆ. ಮೂರ್ನಾಲ್ಕು ವಾರಗಳ ಅಂತರದಲ್ಲಿ ಬೆಳಕಿಗೆ ಬಂದಿರುವ ಈ ಘಟನೆಗಳು ನಾಗರಿಕ ಜಗತ್ತನ್ನು ಬೆಚ್ಚಿಬೀಳಿಸುವಂತಹವು. ನಾವು ವಾಸಿಸುತ್ತಿರುವ ಸಮಾಜ ಹೆಣ್ಣುಮಕ್ಕಳ ಬಗ್ಗೆ ಎಷ್ಟು ನಿರ್ದಯವಾಗಿದೆ ಎನ್ನುವುದನ್ನು ಸೂಚಿಸುವಂತಿರುವ ಇಂಥ ಘಟನೆಗಳು ಮಾಧ್ಯಮಗಳಲ್ಲಿ ಆಗಾಗ ವರದಿಯಾಗುತ್ತಲೇ ಇರುವುದನ್ನು ನೋಡಿದರೆ, ಮಹಿಳೆಯರ ಬಗ್ಗೆ ಸಮಾಜದ ಸಂವೇದನಾರಾಹಿತ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇರುವಂತಿದೆ. ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಕಲಾಶ್ರೀಮಂತಿಕೆ– ಯಾವುದರಿಂದಲೂ ಹೆಣ್ಣನ್ನು ಪುರುಷನಿಗೆ ಸಮಾನವಾಗಿ ನೋಡುವ ಮನಸ್ಥಿತಿ ಸಮಾಜಕ್ಕೆ ಇಲ್ಲದಿರುವುದು ದುರದೃಷ್ಟಕರ.

ಕಟ್ಟುವ ರಚನಾತ್ಮಕ ಕೆಲಸಗಳಲ್ಲಿ ಹೆಣ್ಣು ಗಂಡಿಗಿಂತ ಹೆಚ್ಚು ಸಮರ್ಥಳು ಎನ್ನುವುದನ್ನು ಜಗತ್ತು ಒಪ್ಪಿಕೊಂಡಿದೆ. ಆದರೆ, ಆ ಸಾಮರ್ಥ್ಯ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳ್ಳದಂತೆ ತಾನೇ ಹುನ್ನಾರ ನಡೆಸುತ್ತದೆ. ಭಾರತ ಮಾತ್ರವಲ್ಲ, ವಿಶ್ವದ ಯಾವ ದೇಶವೂ ಮಹಿಳಾ ದೌರ್ಜನ್ಯದಿಂದ ಮುಕ್ತವಾಗಿಲ್ಲ. ವಿಶ್ವದಾದ್ಯಂತ ಪ್ರತಿ 11 ನಿಮಿಷಕ್ಕೆ ಓರ್ವ ಮಹಿಳೆ ಹತ್ಯೆಗೊಳಗಾಗುತ್ತಿರುವ ಲೆಕ್ಕವನ್ನು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ನೀಡಿದ್ದಾರೆ. ಈ ಹತ್ಯೆಗಳು ಬಹುತೇಕ ಸಂದರ್ಭಗಳಲ್ಲಿ, ನತದೃಷ್ಟ ಹೆಣ್ಣುಮಕ್ಕಳ ಸಂಗಾತಿ ಅಥವಾ ಕುಟುಂಬದ ಸದಸ್ಯರಿಂದಲೇ ನಡೆಯುತ್ತಿವೆ. ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು ಅಳುಕುವ ಪೋಷಕರ ಸಂಖ್ಯೆ ಭಾರತದಲ್ಲಿ ದೊಡ್ಡದಿದೆ. ಆದರೆ, ಹೆಣ್ಣುಮಕ್ಕಳಿಗೆ ಮನೆ ಕೂಡ ಸುರಕ್ಷಿತವಲ್ಲ ಎನ್ನುವುದಾದರೆ, ಅವರು ಹೋಗುವುದಾದರೂ ಎಲ್ಲಿಗೆ?

ಕೋವಿಡ್ ಸಾಂಕ್ರಾಮಿಕದಿಂದಾಗಿ ಉಂಟಾದ ಆರ್ಥಿಕ ಸಂಕಷ್ಟಗಳು ಹಾಗೂ ಇತರೆ ಒತ್ತಡಗಳು ಮಹಿಳೆಯರ ಮೇಲಿನ ಮೌಖಿಕ ಹಾಗೂ ದೈಹಿಕ ಕಿರುಕುಳವನ್ನು ಉಲ್ಬಣಗೊಳಿಸಿದವು. ಕೊರೊನಾ ಕಾಲಘಟ್ಟದಲ್ಲಿ ಒಟ್ಟಾರೆ ಅಪರಾಧಗಳ ಸಂಖ್ಯೆ ಇಳಿಮುಖವಾಗಿದ್ದರೂ, ಕೌಟುಂಬಿಕ ಹಿಂಸೆಯ ಘಟನೆಗಳು ಹೆಚ್ಚು ವರದಿಯಾಗಿದ್ದವು. ದೌರ್ಜನ್ಯಕ್ಕೊಳಗಾದ ಮಹಿಳೆಯರ ದೂರುಗಳು ಸಾಮಾನ್ಯ ಸಂದರ್ಭಗಳಿಗಿಂತಲೂ ದುಪ್ಪಟ್ಟು ವರದಿಯಾದುದನ್ನು ರಾಷ್ಟ್ರೀಯ ಮಹಿಳಾ ಆಯೋಗ ಗುರ್ತಿಸಿತ್ತು. ಲಾಕ್‌ಡೌನ್ ಸಂದರ್ಭದಲ್ಲಿ ಕೌಟುಂಬಿಕ ದೌರ್ಜನ್ಯಗಳ ಪ್ರಮಾಣ ಹೆಚ್ಚಾಗಿರುವ ಸಂಗತಿಯನ್ನು ಕೆಲವು ವಕೀಲರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಗಮನಕ್ಕೆ ತಂದಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ಬಹುರೂಪಿಯಾದುದು. ಸ್ತ್ರೀದ್ವೇಷಿ ಮಾತು–ಭಾಷಣಗಳು, ಅಸಭ್ಯ ಚಿತ್ರಗಳ ಪ್ರಕಟಣೆ, ಲೈಂಗಿಕ ದೌರ್ಜನ್ಯ, ನಿಂದನೆ, ಅವಕಾಶಗಳ ನಿರಾಕರಣೆ – ಇವೆಲ್ಲವೂ ಶೋಷಣೆಯ ರೂಪಗಳೇ ಆಗಿವೆ. ಆನ್‌ಲೈನ್ ಮಾಧ್ಯಮ ಮಹಿಳೆಯರ ಮೇಲಿನ ಹಿಂಸಾಚಾರಕ್ಕೆ ಹೊಸ ವೇದಿಕೆಯಾಗಿದೆ. ಹಲವು ರೂಪದಲ್ಲಿ ನಡೆಯುವ ಲಿಂಗ ತಾರತಮ್ಯ ಮತ್ತು ಹಿಂಸಾಚಾರದ ಘಟನೆಗಳು, ಸಮಾಜದ ಎಲ್ಲ ಹಂತಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಅಡ್ಡಿಯಾಗಿವೆ ಹಾಗೂ ಸುಸ್ಥಿರ ಬೆಳವಣಿಗೆಗೆ ಕಂಟಕವಾಗಿ ಪರಿಣಮಿಸಿವೆ.

ಮಹಿಳಾ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ನ. 25ರಿಂದ ಡಿ. 10ರವರೆಗೆ ವಿಶ್ವಸಂಸ್ಥೆ ಜಾಗತಿಕ ಅಭಿಯಾನವೊಂದನ್ನು ನಡೆಸುತ್ತಿದೆ. ‘ಮಹಿಳೆಯರ ಮೇಲಿನ ಹಿಂಸೆ ತಡೆಗೆ ಒಟ್ಟಾಗಿ, ಕ್ರಿಯಾಶೀಲರಾಗಿ’ ಎನ್ನುವುದು ಈ ಅಭಿಯಾನದ ಘೋಷವಾಕ್ಯ. ಮಹಿಳಾ ದೌರ್ಜನ್ಯದಿಂದಾಗಿ ಜಾಗತಿಕ ಮಾನವ ಹಕ್ಕುಗಳ ವ್ಯಾಪಕ ಉಲ್ಲಂಘನೆಯಾಗುತ್ತಿದ್ದು, ಈ ಪರಿಸ್ಥಿತಿಯನ್ನು ನಿಭಾಯಿಸಲು ಎಲ್ಲ ದೇಶಗಳು ರಾಷ್ಟ್ರೀಯ ಕ್ರಿಯಾಯೋಜನೆ ರೂಪಿಸಬೇಕೆಂದು ವಿಶ್ವಸಂಸ್ಥೆ ಕರೆನೀಡಿದೆ. ಇಂಥ ಕ್ರಿಯಾಯೋಜನೆಗಳು ಸರ್ಕಾರಿ ಮಟ್ಟದಲ್ಲಿ ರೂಪುಗೊಂಡರೆ ಸಾಲದು, ಸಮುದಾಯ, ಕುಟುಂಬದ ನೆಲೆಗಟ್ಟಿನಲ್ಲೂ ಅನುಷ್ಠಾನಕ್ಕೆ ಬರಬೇಕು. ವೈಯಕ್ತಿಕ ನೆಲೆಗಟ್ಟಿನಲ್ಲೂ ಲಿಂಗಸಮಾನತೆಯ ಪ್ರಯತ್ನಗಳು ಪ್ರಜ್ಞಾಪೂರ್ವಕವಾಗಿ ಜಾರಿಯಲ್ಲಿರಬೇಕು.

ಹೆಣ್ಣನ್ನು ಸಮಾನವಾಗಿ ನಡೆಸಿಕೊಳ್ಳದ ಯಾವುದೇ ಸಮಾಜಕ್ಕೆ ತನ್ನ ಸಂಸ್ಕೃತಿಯ ಹಿರಿಮೆಯ ಬಗ್ಗೆ ಮಾತನಾಡುವ ಅಥವಾ ಸಂಭ್ರಮಿಸುವ ನೈತಿಕ ಹಕ್ಕಿರುವುದಿಲ್ಲ. ಲಿಂಗ ತಾರತಮ್ಯದ ಮೇಲೆ ಆರೋಗ್ಯಕರ ಸಮಾಜ ರೂಪುಗೊಳ್ಳುವುದು ಅಥವಾ ದೇಶವೊಂದರ ಅಭಿವೃದ್ಧಿಯಾಗುವುದು ಸಾಧ್ಯವಿಲ್ಲ. ಪುರುಷ ಪಕ್ಷಪಾತಿ ಸಮಾಜ ಮಹಿಳೆಯರಿಗೆ ವಿಶೇಷ ಸವಲತ್ತುಗಳನ್ನು ಕಲ್ಪಿಸುವ ಅಗತ್ಯವೇನೂ ಇಲ್ಲ. ಅವರನ್ನು ಅವರ ಪಾಡಿಗೆ ಬದುಕಲು ಬಿಟ್ಟರೆ, ಮಹಿಳೆಯರೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

■ ರಘುನಾಥ ಚ.ಹ.


ಈಶ್ವರ್